# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**

**Malleshwaram, Bengaluru – 560 003**

## 2023-24ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ

## S.S.L.C. MODEL QUESTION PAPER – 2023-24

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

ಸಮಯ : 3 ಗಂಟೆ ] **ವಿಷಯ ಸಂಕೇತ : 62-K**

ಗರಿಷ್ಠ ಅಂಕಗಳು : 80 ] **Subject Code : 62-K**

**CCE-RF : ಶಾಲಾ ವಿದ್ಯಾರ್ಥಿಗಳು / Regular Fresh**

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 8 × 1 = 8**

1. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಗಳ ಸಂಖ್ಯೆ

   (ಎ) ೪೯

   (ಬಿ) ೨೫

   (ಸಿ) ೦೯

   (ಡಿ) ೧೩

2. 'ಹಣತೆ' – ಈ ಪದದ ಸಮಾನಾರ್ಥಕ ಪದ

   (ಎ) ಕತ್ತಲು

   (ಬಿ) ದೀಪ

   (ಸಿ) ಚಂದ್ರ

   (ಡಿ) ಬಣ್ಣ

3. ಆರ್. ಕಲ್ಯಾಣಮ್ಮನವರೊಡನೆ ಕೊಡಗಿನ ಗೌರಮ್ಮನವರು ಸಂಪರ್ಕವನ್ನು ಇಟ್ಟುಕೊಂಡಿದ್ದರು. ಈ ವಾಕ್ಯದಲ್ಲಿರುವ ದ್ವಿತೀಯಾ ವಿಭಕ್ತಿ ಪ್ರತ್ಯಯದಿಂದ ಕೂಡಿದ ಪದ

(ಎ) ಕೊಡಗಿನ

(ಬಿ) ಕೊಂಡಿದ್ದರು

(ಸಿ) ಸಂಪರ್ಕವನ್ನು

(ಡಿ) ಗೌರಮ್ಮ

4. 'ಆಸಕ್ತಿ' – ಈ ಪದದ ವಿರುದ್ಧಾರ್ಥಕ ಪದ

(ಎ) ನಿರಾಸಕ್ತಿ

(ಬಿ) ದುರಾಸಕ್ತಿ

(ಸಿ) ಪರಾಸಕ್ತಿ

(ಡಿ) ಮೇಲಿನ ಯಾವುದೂ ಅಲ್ಲ

5. 'ಪೂರ್ವೋತ್ತರ' – ಈ ಪದವನ್ನು ಬಿಡಿಸಿದಾಗ ಆಗುವ ರೂಪ

(ಎ) ಪೂರ್ವ + ಉತ್ತರ

(ಬಿ) ಪೂರು + ಉತ್ತರ

(ಸಿ) ಪೂರ್ವಕ್ಕೆ + ಉತ್ತರ

(ಡಿ) ಪೂ + ಉತ್ತರ

6. ಒಬ್ಬರು ಹೇಳಿದ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

(ಎ) ಭಾವಸೂಚಕ ಚಿಹ್ನೆ

(ಬಿ) ಪ್ರಶ್ನಾರ್ಥಕ ಚಿಹ್ನೆ

(ಸಿ) ಅಲ್ಪವಿರಾಮ ಚಿಹ್ನೆ

(ಡಿ) ಉದ್ಧರಣ ಚಿಹ್ನೆ

7. 'ವರ್ಣ' – ಈ ಪದದ ತದ್ಭವ ರೂಪ

(ಎ) ವರುಣ

(ಬಿ) ವರಣ

(ಸಿ) ಬಣ್ಣ

(ಡಿ) ಬಿಳುಪು

8. 'ಹದ್ದು ಮೀನನ್ನು ತಿಂದಿತು.' – ಈ ವಾಕ್ಯವು

(ಎ) ಮಿಶ್ರವಾಕ್ಯ

(ಬಿ) ಸಾಮಾನ್ಯ ವಾಕ್ಯ

(ಸಿ) ಸಂಯೋಜಿತ ವಾಕ್ಯ

(ಡಿ) ವಿಗ್ರಹ ವಾಕ್ಯ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4 × 1 = 4**

9. ಶರೀಫರ ತಾಯಿ : ಹಾಜುಮ್ :: ಶರೀಫರ ತಂದೆ : ......................... .

10. ಗುಂಡಪ್ಪನವರ ತಿಮ್ಮ : ಸೂರ್ಯ :: ಬೀಚಿಯವರ ತಿಂಮ : ......................... .

11. ಮಾನವ ಹುಟ್ಟುವಾಗ : 'ವಿಶ್ವಮಾನವ' :: ಬೆಳೆಯುತ್ತಾ : ......................... .

12. ಆಚಾರವೇ : ಸ್ವರ್ಗ :: ಅನಾಚಾರವೇ : ......................... .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4 × 1 = 4**

13. ಕೊಡಗಿನ ಗೌರಮ್ಮನವರ ವಿವಾಹ ಯಾರೊಡನೆ ಆಯಿತು ?

14. ನವೀನ ಯುಗದ ಕೇತನ ಯಾವುದು ?

15. ಪುಲಿಗೆರೆ ಸೋಮನಾಥ ಹೇಳಿರುವಂತೆ ಮಗನಾದವನಲ್ಲಿ ಇರಬೇಕಾದ ಗುಣ ಯಾವುದು ?

16. ಎಂಥವನು ಭಟನಾಗಬೇಕೆಂದು ಸೋಮೇಶ್ವರ ಶತಕದಲ್ಲಿ ತಿಳಿಸಲಾಗಿದೆ ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8 × 2 = 16**

17. ಗಾಂಧೀಜಿಯವರು ಗೌರಮ್ಮನವರ ಮನೆಗೆ ಏಕೆ ಬಂದರು ?

18. ಕೊಡಗಿನ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡಿದ್ದಾರೆಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

19. ತುಳಜಾಬಾಯಿಯ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ.

20. ಕಿತ್ತೂರು ಚೆನ್ನಮ್ಮ ಸೆರೆಯಾದುದೇಕೆ ?

21. ವಿಲಯ ರುದ್ರರು ಏನು ಮಾಡುತ್ತಾರೆ ?

22. ಗ್ರಂಥಾಲಯವನ್ನು ಹೊಕ್ಕಾಗ ಕವಿಗೆ ಆದ ಅನುಭವವೇನು ?

23. ಪುರಂದರದಾಸರು ಡಾಂಭಿಕನ ಭಕ್ತಿಯನ್ನು ನಾಟಕ ಸ್ತ್ರೀಗೆ ಹೋಲಿಸಿದುದರ ವೈಶಿಷ್ಟ್ಯವನ್ನು ನಿಮ್ಮ ಮಾತುಗಳಲ್ಲಿ ಅಭಿವ್ಯಕ್ತಪಡಿಸಿರಿ.

24. ಧರ್ಮಪದನಿಗೆ ಬುತ್ತಿಕೊಟ್ಟ ಶಿಲ್ಪಿಯ ಮುಖ ಏಕೆ ಬಿಳಿಚಿಕೊಂಡಿತು ?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2 × 3 = 6**

25. "ದಯವಿಟ್ಟು ಇದನ್ನು ಓದಿ."

26. "ಕರ್ನಾಟಕ ವಂಗ ಆಂಧ್ರ ಭಾರತೀಯರೊಂದೆ."

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4 × 3 = 12**

27. ಶರೀಫರ ತತ್ವಪದಗಳ ವೈಶಿಷ್ಟ್ಯವನ್ನು ವಿವರಿಸಿ ಬರೆಯಿರಿ.

28. ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದಕ್ಕೆ ಕೆ.ಎಸ್. ನಿಸಾರ್ ಅಹಮದ್‌ರವರು ನೀಡಿರುವ ನಿದರ್ಶನಗಳಾವುವು ?

[ Turn over

29. ಸಿ.ಪಿ.ಕೆ.ಯವರು ಗ್ರಂಥಾಲಯದ ಮುಂದೆ ವಿನಮ್ರಭಾವದಿಂದ ನಿಂತ ರೀತಿಯನ್ನು ನೀವು ಹೇಗೆ ಪ್ರಶಂಸಿಸುವಿರಿ ? ವಿವರಿಸಿ.

30. ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವು ಚಿತ್ರಿತವಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

31. ಪ್ರೊ|| ಎಸ್.ಆರ್. ರೋಹಿಡೇಕರ್

32. ಬಸವಣ್ಣ

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3**

33. "ಕೈ ಕೆಸರಾದರೆ, ಬಾಯಿ ಮೊಸರು."

**ಅಥವಾ**

"ಹಾಸಿಗೆ ಇದ್ದಷ್ಟು ಕಾಲು ಚಾಚು."

**IX. ಕೆಳಗಿನ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4**

34. ಮಿನಿಪೊಲೀಸ್ ನಗರದಲ್ಲಿ ಗೊರೂರರು ತಪ್ಪಿಸಿಕೊಂಡ ಪ್ರಕರಣವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ ಬರೆಯಿರಿ.

**ಅಥವಾ**

ಮಿನಿಪೊಲೀಸ್ ನಗರದಲ್ಲಿ ಗೊರೂರರಿಗೆ ಎದುರಾದ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳನ್ನು ವಿವರಿಸಿ ಬರೆಯಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

35. ಅಪ್ಪರಿಲ್ಲದೆ ..........................................................

..........................................................

.................................................. ಕರುಣೇಸೊ

**ಅಥವಾ**

ಮೂಡಮೋಡ ..........................................................

..........................................................

.................................................. ಮುಗಿಲಲ್ಲಿ

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 × 4 = 4**

36. ಗುರು ಶಿಷ್ಯರ ಸಂಬಂಧ ತಂದೆ ಮಕ್ಕಳಷ್ಟೇ ಪವಿತ್ರವಾಗಿರುತ್ತದೆ. ವಿದ್ಯಾರ್ಥಿಗಳನ್ನು ಜೀವನದುದ್ದಕ್ಕೂ ಅವರನ್ನು ತಿದ್ದುವ, ಆತ್ಮಸ್ಥೈರ್ಯ ತುಂಬುವ ಕೆಲಸವನ್ನು ಶಿಕ್ಷಕರು ಮಾಡುತ್ತಲೇ ಇರುತ್ತಾರೆ. ಮಕ್ಕಳ ಮನಸ್ಸನ್ನು ಶ್ರೇಷ್ಠ ಗುರು ಮಾತ್ರ ಅರ್ಥ

ಮಾಡಿಕೊಳ್ಳಬಲ್ಲರು. ಅವರಿಗೆ ಅಗತ್ಯವಿರುವ ಜ್ಞಾನವನ್ನು ಅಗತ್ಯ ಸಂದರ್ಭಗಳಲ್ಲಿ ತಿಳಿಸಿಕೊಡುವ ಜಾಣ್ಮೆ ಗುರುವಿನಲ್ಲಿರುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಶಿಕ್ಷಕರ ಕುರಿತು ಅಪಾರವಾದ ಗೌರವಾಭಿಮಾನವನ್ನು ಹೊಂದಿರುತ್ತಾರೆ. ನಿಜವಾದ ಶಿಕ್ಷಕನು ವಿದ್ಯಾರ್ಥಿಗಳನ್ನು ಸ್ವಂತ ಮಕ್ಕಳಿಗಿಂತ ಹೆಚ್ಚು ಪ್ರೀತಿಸುತ್ತಾನೆ. ವಿದ್ಯಾರ್ಥಿಯು ತನ್ನ ಜೀವನದಲ್ಲಿ ಉತ್ತಮವಾಗಿ ಪಾಠ ಮಾಡಿದ ಗುರುವನ್ನು ಮರೆಯಲಾರ. ಹಾಗೆಯೇ ಶ್ರೇಷ್ಠ ಗುರು ಕೂಡ ಉತ್ತಮ ವಿದ್ಯಾರ್ಥಿಗಳನ್ನು ಮರೆಯಲು ಸಾಧ್ಯವಿಲ್ಲ.

***ಪ್ರಶ್ನೆಗಳು :***

ಎ) ಗುರು ಶಿಷ್ಯರ ಸಂಬಂಧ ಹೇಗಿರುತ್ತದೆ ?

ಬಿ) ವಿದ್ಯಾರ್ಥಿಗಳ ಜೀವನದುದ್ದಕ್ಕೂ ಶಿಕ್ಷಕರು ಯಾವ ಯಾವ ಕೆಲಸಗಳನ್ನು ಮಾಡುತ್ತಿರುತ್ತಾರೆ ?

ಸಿ) ಮಕ್ಕಳ ಮನಸ್ಸನ್ನು ಯಾರು ಅರ್ಥ ಮಾಡಿಕೊಳ್ಳಬಲ್ಲರು ?

ಡಿ) ವಿದ್ಯಾರ್ಥಿಗಳು ಶಿಕ್ಷಕರ ಕುರಿತು ಅಪಾರವಾದ ಗೌರವಾಭಿಮಾನವನ್ನು ಹೊಂದಲು ಕಾರಣವೇನು ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** **1 × 4 = 4**

37. ಗಣಕಯಂತ್ರ

**ಅಥವಾ**

ಸ್ವಚ್ಛ ಭಾರತ ಅಭಿಯಾನ.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

38. ನಿಮ್ಮನ್ನು ಬೆಂಗಳೂರಿನ ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯ ನಿವಾಸಿ 'ಸ್ವಪ್ನ' ಎಂದು ಭಾವಿಸಿಕೊಂಡು, ಚಿತ್ರದುರ್ಗದಲ್ಲಿರುವ ನಿಮ್ಮ ಅಕ್ಕನನ್ನು ದೀಪಾವಳಿ ಹಬ್ಬಕ್ಕೆ ಆಹ್ವಾನಿಸಿ, ಒಂದು ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಶಿವಮೊಗ್ಗದ ಆನವಟ್ಟಿಯ ನಿವಾಸಿ 'ರಮೇಶ' ಎಂದು ಭಾವಿಸಿಕೊಂಡು, ಊರಿನ ಓಣಿಗಳಿಗೆ ದೀಪದ ವ್ಯವಸ್ಥೆಯನ್ನು ಮಾಡಿಕೊಡುವಂತೆ ಕೋರಿ, ಗ್ರಾಮಪಂಚಾಯತಿಯ ಅಧ್ಯಕ್ಷರಿಗೊಂದು ಮನವಿ ಪತ್ರವನ್ನು ಬರೆಯಿರಿ.